**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/118/2018/ARE-13

Multi Storied Building,
Dr. B.R. Ambedkar Veedhi,
Bengaluru-560001
Date: 25th July, 2022.

# RECOMMENDATION

Sub: Departmental Inquiry against Shri Vishwanath, the then Panchayath Development Officer, Chikkakotnekal Gram Panchayath, Manvi Taluk, Raichur District [presently working as Assistant Director (Rural Development), Taluk Panchayath, Hagaribommanahalli, Ballari]-reg.,

Ref: 1) Government Order No.ಗ್ರಾಅಪ 30 ಕೆಎಸ್ಎಸ್ 2018, Bengaluru, dated: 27/02/2018.

2) Nomination Order No.UPLOK-1/DE/118/ 2018, Bengaluru, dated: 09/03/2018 of Upalokayukta, State of Karnataka, Bengaluru.

3) Inquiry Report dated: 21/07/2022 of Additional Registrar of Enquiries-13, Karnataka Lokayukta, Bengaluru.

*****

The Government by its order dated: 27/02/2018 initiated the disciplinary proceedings against Shri Vishwanath, the then Panchayath Development Officer, Chikkakotnekal Gram Panchayath, Manvi Taluk, Raichur District [presently working as

Assistant Director (Rural Development), Taluk Panchayath, Hagaribommanahalli, Ballari] (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No. UPLOK-1/DE/118/2018, Bengaluru, dated: 09/03/2018 nominated Additional Registrar of Enquiries-4, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him. Subsequently, by Order No.UPLOK-1 & 2/DE/Transfers/2018, Bengaluru, dated: 06/08/2018, the Additional Registrar of Enquiries-13, Karnataka Lokayukta, Bengaluru was re-nominated as Inquiry Officer to conduct Departmental Inquiry against DGO.

3. The DGO, Shri Vishwanath, the then Panchayath Development Officer, Chikkakotnekal Gram Panchayath, Manvi Taluk, Raichur District [presently working as Assistant Director (Rural Development), Taluk Panchayath, Hagaribommanahalli, Ballari] were tried for the following charges:

**ANNEXURE-1**
**CHARGE**

That you-DGO Shri Vishwanath, the then Panchayath Development Officer, Chikkakotnekal Gram Panchayath, Manvi Taluk, Raichur District (Presently working as Assistant Director (Rural Employment) Taluk Panchayath, Hagaribommanahalli, Bellary District in respect of "Indira Awas Scheme and Basava Vasati Scheme" carried out during 2009 to 2013 in respect of beneficiary Kasturamma W/o Sharanappa Sajjana beneficiary No.209264 and Sammajibee W/o Mahaboobsab beneficiary No.259060 have not constructed houses and they have taken photographs of existing old house and amount is paid to them though they have not constructed the houses. In the photographs, all 4 stages of construction of the houses of said beneficiaries are same and you-DGO has paid the amount without verifying the construction of houses. Beneficiary Fathima W/o Moulana sab-beneficiary No.187676, b) Lalabi W/o Bhavasab-beneficiary No.187672 and beneficiary Husainabi W/o Hasansab beneficiary No.187674 have not constructed houses. An amount of Rs.75,000/- paid to Fathima w/o Moulanasab through cheque. An amount of Rs.35,000/- is paid to Lalabi W/o Bhavasab and an amount of Rs. 35,000/- is paid to Husainabi W/o Hasansab though they have not constructed houses. You-DGO has issued cheque for Rs.40,000/- Lalabi W/o Bhavasab and cheque for Rs.40,000/- to Husainabi W/o Hasansab towards 3rd and 4th stage of houses though they have not constructed the houses. Thereby, you-DGO being a Government Servant failed to maintain absolute integrity and devotion to duty, the act which is unbecoming of a Government Servant and thereby committed misconduct as enumerated U/R 3(1)(i) to (iii) of Karnataka Civil Service (Conduct) Rules 1966.

4. The Inquiry Officer (Additional Registrar of Enquiries-13) on proper appreciation of oral and documentary evidence has held that, the Disciplinary Authority has 'Proved' the charges leveled against DGO, Shri Vishwanath, the then Panchayath

Development Officer, Chikkakotnekal Gram Panchayath, Manvi Taluk, Raichur District [presently working as Assistant Director (Rural Development), Taluk Panchayath, Hagaribommanahalli, Ballari].

5. On perusal of the Inquiry Report, in order to prove the guilt of the DGO, the Disciplinary Authority has examined three witnesses i.e., PW-1 to PW-3 and Ex. P-1 to P-3 documents were got marked. DGO has examined himself as DW-1 and Ex. D-1 to D-8 documents were got marked.

6. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of the Inquiry Officer.

7. As per the First Oral Statement of DGO furnished by the Inquiry Officer, DGO, Shri Vishwanath, the then Panchayath Development Officer, Chikkakotnekal Gram Panchayath, Manvi Taluk, Raichur District [presently working as Assistant Director (Rural Development), Taluk Panchayath, Hagaribommanahalli, Ballari]will retire from service on 31/05/2035.

8. Having regard to the nature of charge 'Proved' against DGO, Shri Vishwanath, the then Panchayath Development Officer, Chikkakotnekal Gram Panchayath, Manvi Taluk, Raichur District [presently working as Assistant Director (Rural Development), Taluk Panchayath, Hagaribommanahalli, Ballari] and on consideration of the totality of circumstances:-

> "It is hereby recommended to the Government to impose penalty of withholding two annual increments payable to DGO, Shri Vishwanath, the then Panchayath Development Officer, Chikkakotnekal Gram Panchayath, Manvi Taluk, Raichur District [presently working as Assistant Director (Rural Development), Taluk Panchayath, Hagaribommanahalli, Ballari] with cumulative effect".

9. Action taken in the matter shall be intimated to this Authority.

Connected records are enclosed herewith.

Sd/- 25/7/22

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ/118/2018/ಎಆರ್ಇ-13

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001.
ದಿನಾಂಕ: 21/07/2022.

## ವಿಚಾರಣಾ ವರದಿ

**ಉಪಸ್ಥಿತರು: ಶೋಭಾ ಎಸ್,**
ಅಪರ ನಿಬಂಧಕರು (ವಿಚಾರಣೆಗಳು-13),
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:-** ಶ್ರೀ. ವಿಶ್ವನಾಥ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಕೊಟ್ನೆಕಲ್ ಗ್ರಾಮ ಪಂಚಾಯಿತಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ (ಪ್ರಸ್ತುತ ಸಹಾಯಕ ನಿರ್ದೇಶಕರು) (ಗ್ರಾಮೀಣ ಉದ್ಯೋಗ), ಹಗರಿಬೊಮ್ಮನಹಳ್ಳಿ ತಾಲ್ಲೂಕು ಪಂಚಾಯಿತಿ, ಬಳ್ಳಾರಿ ಜಿಲ್ಲೆ ರವರ ವಿರುದ್ಧ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:-** 1. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/2026 & 2027/2016/ಎ.ಆರ್.ಇ-5, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ :28/12/2017.

2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 30 ಕೆಎಸ್‌ಎಸ್ 2018, ಬೆಂಗಳೂರು, ದಿನಾಂಕ : 27/02/2018.

3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/118/2018, ಬೆಂಗಳೂರು, ದಿನಾಂಕ: 09/03/2018.

* * * *

1. ದೂರುದಾರರಾದ ಶ್ರೀ. ಮುತ್ತಣ್ಣ ಬಿನ್ ರಾಯಪ್ಪ, ಜಾಗೀರ್ ಪನ್ನೂರು, ಚಿಕ್ಕಾಲಪರ್ವಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ ಮತ್ತು 2) ಶ್ರೀ. ರಂಗನಾಥ ನಾಯ್ಕ್ ಬಿನ್ ನಾರಾಯಣಪ್ಪ, ಜಾಗೀರ್ ಪನ್ನೂರು, ಚಿಕ್ಕಾಲಪರ್ವಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ ರವರುಗಳು ಆಪಾದಿತ ಸರ್ಕಾರಿ ನೌಕರರಾದ ಶ್ರೀ. ವಿಶ್ವನಾಥ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಕೊಟ್ನೆಕಲ್ ಗ್ರಾಮ ಪಂಚಾಯಿತಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ (ಪ್ರಸ್ತುತ ಸಹಾಯಕ ನಿರ್ದೇಶಕರು) (ಗ್ರಾಮೀಣ ಉದ್ಯೋಗ), ಹಗರಿಬೊಮ್ಮನಹಳ್ಳಿ ತಾಲ್ಲೂಕು ಪಂಚಾಯತಿ, ಬಳ್ಳಾರಿ ಜಿಲ್ಲೆ ರವರ ವಿರುದ್ಧ ದೂರನ್ನು ಸಲ್ಲಿಸಿ, ಸದರಿ ದೂರಿನಲ್ಲಿ ಆ.ಸ.ನೌ ರವರು ಚಿಕ್ಕಕೊಟ್ನೆಕಲ್ ಗ್ರಾಮ ಪಂಚಾಯತಿಯಲ್ಲಿ 2011-12 ಹಾಗೂ 2012-13 ನೇ ಸಾಲಿನಲ್ಲಿ ಇಂದಿರಾ ಆವಾಸ್ ವಸತಿ ಯೋಜನೆಯಲ್ಲಿ 13 ಮನೆಗಳು ಹಾಗೂ 2011 ರಲ್ಲಿ ಬಸವ ವಸತಿ ಯೋಜನೆಯಲ್ಲಿ 5 ಮನೆಗಳು ಮತ್ತು ಇಂದಿರಾ ಆವಾಸ್ ವಸತಿ ಯೋಜನೆಯಲ್ಲಿ 16 ಮನೆಗಳ ನಿರ್ಮಾಣದಲ್ಲಿ ಅವ್ಯವಹಾರ ಮಾಡಿರುತ್ತಾರೆಂದು ದೂರನ್ನು ಸಲ್ಲಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ರಡಿಯಲ್ಲಿ ಉಲ್ಲೇಖ (1) ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2) ರಲ್ಲಿ ಕಾಣಿಸಿದಂತೆ, ದಿನಾಂಕ: 27/02/2018 ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತರವರು ದಿನಾಂಕ: 09/03/2018 ರಂದು ಅಪರ ನಿಬಂಧಕರು (ವಿಚಾರಣೆಗಳು-4) ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ (Articles of Charge) ಅನ್ನು ಅಪರ ನಿಬಂಧಕರು (ವಿಚಾರಣೆಗಳು-4) ರವರು

ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 07/04/2018 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

4. ಅಧಿಕೃತ ಜ್ಞಾಪನ ಸಂಖ್ಯೆ: ಉಪಲೋಕ್-1 & 2/ಡಿಇ/ವರ್ಗಾವಣೆ/2018, ದಿನಾಂಕ:06/08/2018 ರ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಆದೇಶದಂತೆ ಸದರಿ ಇಲಾಖಾ ವಿಚಾರಣೆಯನ್ನು ಅಪರ ನಿಬಂಧಕರು (ವಿಚಾರಣೆಗಳು-4) ರವರಿಂದ ಅಪರ ನಿಬಂಧಕರು (ವಿಚಾರಣೆಗಳು-13) ಶಾಖೆಗೆ ವರ್ಗಾವಣೆಗೊಂಡಿರುತ್ತದೆ.

## ANNEXURE-1
## CHARGE

5. That, you-DGO/Sri. Vishwanath, the then Panchayath Development Officer, Chikkakotnekal Gram Panchayath, Manvi Taluk, Raichur District (Presently working as Assistant Director (Rural Employment) Taluk Panchayath, Hagaribommanahalli, Bellary District in respect of "Indira Awas Scheme and Basava Vasati Scheme" carried out during 2009 to 2013 in respect of beneficiary Kasturamma w/o Sharanappa Sajjana beneficiary No.209264 and Sammajibee w/o Mahaboobsab beneficiary No.259060 have not constructed houses and they have taken photographs of existing old house and amount is paid to them though they have not constructed the houses. In the photographs, all 4 stages of construction of the houses of said beneficiaries are

same and you-DGO has paid the amount without verifying the construction of houses. Beneficiary Fathima w/o Moulana sab-beneficiary No.187676, b) Lalabi w/o Bhavasab-beneficiary No.187672 and beneficiary Husainabi w/o Hasansab beneficiary No.187674 have not constructed houses. An amount of Rs.75,000/- paid to Fathima w/o Moulanasab through cheque. An amount of Rs.35,000/- is paid to Lalabi w/o Bhavasab and an amount of Rs. 35,000/- is paid to Husainabi w/o Hasansab though they have not constructed houses. You-DGO has issued cheque for Rs.40,000/- Lalabi w/o Bhavasab and cheque for Rs.40,000/- to Husainabi w/o Hasansab towards 3rd and 4th stage of houses though they have not constructed the houses. Thereby, you-DGO being a Government Servant failed to maintain absolute integrity and devotion to duty, the act which is unbecoming of a Government Servant and thereby committed misconduct as enumerated U/R 3(1)(i) to (iii) of Karnataka Civil Service (Conduct) Rules 1966.

**ANNEXURE NO-II**

**STATEMENT OF IMPUTATIONS OF MISCONDUCT**

6. On the basis of a complaint filed by 1) Sri. Muttanna s/o Rayappa, Jagir Pannuru, Chikalaparavi, Manvi Taluk, Raichur District and 2) Sri. Ranganath Nayak s/o Narayanappa, Jagir Pannuru, Chikalaparavi, Manvi Taluk, Raichur District (herein after referred to as 'complainants or complainant Nos.1 and 2' for short ),

against you-DGO, an investigation was taken up u/sec. 9 of the Karnataka Lokayukta Act 1984, by invoking powers vested u/sec. 7(2) of the said Act.

7. **The brief facts of the complainant's are that:**

8. Allegations made against you-DGO by complainant No.1 is that, you-DGO has committed many illegalities in allotting houses under Indira Awas Scheme during 2009 to 2013 and Basava Vasathi Scheme during 2009 to 2013.

9. Complainant No.2 filed complaint against you-DGO that, you has committed many illegalities in allotting houses under Indira Awas Scheme and Basava Vasathi Scheme during 2009 to 2013.

10. You-DGO has submitted separate comments in both the complaints. Your comments in both the complaints is similar. You-DGO submitted that the beneficiaries are identified under Indira Awas Scheme in accordance with the guidelines issued by the Government and Rajiv Gandhi Rural Housing Corporation. Amount is paid to beneficiaries after verifying the construction by taking photographs of the construction and also by verifying construction through GPS.

11. Report was called for from S.P, Karnataka Lokayukta, Raichur in both the complaints. Investigation is conducted Dy.S.P., Lokayukta, Raichur (I.O for short) on the instructions of S.P, Karnataka Lokayukta, Raichur I.O has submitted common reports in both the complaints. S.P., Lokayukta, Raichur has forwarded report dated : 01/12/2017 of I.O.

12. Since common allegations are made in both complaints and you-DGO is common in both the complaints and common investigation report is filed by I.O concerning allegations made in both the complaints, common 12(3) report is made in respect of both the complaints.

13. The report of I.O is that,

a) Beneficiary Kasturamma w/o Sharanappa Sajjana beneficiary No.209264 and Sammajibee w/o Mahaboobsab beneficiary No.259060 have not constructed houses and they have taken photographs of existing old house and amount is paid to them though they have not constructed the houses. In the photographs, all 4 stages of construction of the houses of said beneficiaries are same and you-DGO has paid the amount without verifying the construction of houses.

b) Beneficiary Fathima w/o Moulana sab - beneficiary No.187676, b) Lalabi w/o Bhavasab-beneficiary No.187672 and c) Beneficiary Husainabi w/o Hasansab beneficiary No.187674 have not constructed houses. An amount of Rs.75,000/- paid to Fathima w/o Moulanasab through cheque. An amount of Rs.35,000/- is paid to Lalabi w/o Bhavasab and an amount of Rs.35,000/- is paid to Husainabi w/o Hasansab though they have not constructed houses. You – DGO has issued cheque for Rs.40,000/- Lalabi w/o Bhavasab and cheque for Rs.40,000/- to Husainabi w/o Hasansab towards 3rd and 4th stage of houses though they have not constructed the houses.

14. In view of the report of I.O comments submitted by you-DGO is not acceptable to drop the proceedings against you-DGO.

15. Since the said facts and materials on record prima-facie show that you-DGO being Public/Government Servant, has committed misconduct as per Rule 3(1)(i) to (iii) of the KCS (Conduct) Rules, 1966, now acting under section 12(3) of the Karnataka Lokayukta Act, recommendation is made to the Competent Authority to initiate disciplinary proceedings against you-DGO and to entrust the inquiry to this Authority under Rule 14-A of the Karnataka Civil Services

(Classification, Control and Appeal) Rules. In turn Competent Authority initiated disciplinary proceedings against you-DGO and entrusted the Enquiry to this institution vide Reference No-1 and Hon'ble Upalokayuta nominated this Enquiry Authority, to conduct enquiry and report vide reference No-2. Hence, this charge.

16. ಈ ಮೇಲ್ಕಂಡ ದೋಷಾರೋಪಣೆ (Article of charge) ಅನ್ನು ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ : 07/05/2018 ರಂದು ವಿಚಾರಣಾಧಿಕಾರಿಗಳ ಮುಂದೆ ಹಾಜರಾಗಿದ್ದು, ಅವರ ಪ್ರಥಮ ಹೇಳಿಕೆಯನ್ನು ಪಡೆಯಲಾಯಿತು. ಆ.ಸ.ನೌ ರವರು ದಿನಾಂಕ : 25/08/2018 ರಂದು ತಮ್ಮ ಪರವಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಅದರಲ್ಲಿ ದೋಷಾರೋಪಣೆಯಲ್ಲಿ ಮಾಡಿದ ಆಪಾದನೆಯ ಅಂಶಗಳನ್ನು ಅಲ್ಲಗೆಳೆದಿರುತ್ತಾರೆ. ಇಂದಿರಾ ಆವಾಸ್ ಯೋಜನೆಯ 2012-13 ನೇ ಸಾಲಿನ ಫಲಾನುಭವಿಗಳಾದ ಶ್ರೀಮತಿ. ಕಸ್ತೂರಮ್ಮ ಗಂಡ ಶರಣಪ್ಪ ಸಜ್ಜನ ಸಂ: 209264 ಮತ್ತು ಶ್ರೀಮತಿ. ಸಮ್ಮಜಬೀ ಗಂಡ ಮಹಿಬೂಬಾ ಸಾಬ್ ಸಂ.259060 ಇವರುಗಳು ಮನೆಯನ್ನು ಕಟ್ಟಿಸದೇ ತಮ್ಮ ಹಳೆಯ ಮನೆಗಳ ಮುಂದೆ ನಿಂತು ಜಿ.ಪಿ.ಎಸ್ ಮಾಡಿಸಿದ್ದು, ಇದನ್ನು ಸರಿಯಾಗಿ ಪರಿಶೀಲನೆ ನಡೆಸದೇ ಹೊಸದಾಗಿ ಮನೆ ನಿರ್ಮಿಸದಿದ್ದರೂ ಸಹ ನಾಲ್ಕು ಹಂತದ ನಿರ್ಮಾಣಕ್ಕೆ ಲಭ್ಯವಾಗಬಹುದಾದ ಅನುದಾನದ ಮೊತ್ತವನ್ನು ಪಾವತಿ ಮಾಡಿರುವುದಾಗಿ ಹಾಗೂ 2011-12ನೇ ಸಾಲಿನ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಾದ ಶ್ರೀಮತಿ. ಫಾತೀಮ ಗಂಡ ಮೌಲ ಸಾಬ ಫಲಾನುಭವಿ ಸಂ:187676, 2) ಶ್ರೀಮತಿ. ಲಾಲಬಿ ಗಂಡ ಬಾಬಸಾ ಸಂ: 187672, 3) ಶ್ರೀಮತಿ. ಹುಸೇನಬೀ ಗಂಡ ಹಸನಸಾಬ ಸಂ.187674 ಇವರುಗಳು ಸಹ ಮನೆಗಳನ್ನು ಕಟ್ಟಿಸಿಕೊಳ್ಳದಿದ್ದರೂ ಸಹ ಶ್ರೀಮತಿ. ಫಾತೀಮ ಗಂಡ ಮೌಲಸಾಬ ಇವರಿಗೆ ರೂ.75,000/- ಗಳ ಚೆಕ್ ಶ್ರೀಮತಿ.

ಲಾಲಬಿ ಗಂಡ ಬಾಬಸಾ ಇವರಿಗೆ ರೂ.35,000/- ಹಾಗೂ 3) ಶ್ರೀಮತಿ. ಹುಸೇನಬೀ ಗಂಡ ಹಸನಸಾಬ ಇವರಿಗೆ ರೂ.35,000/- ಗಳನ್ನು ನಗದು ಪಾವತಿ ಮಾಡಿದ್ದು, ನಂತರ ಕ್ರಮವಾಗಿ 3ನೇ ಮತ್ತು 4ನೇ ಹಂತದ ಮನೆ ನಿರ್ಮಾಣದ ವೆಚ್ಚವಾಗಿ ರೂ.40,000/- ಗಳ ಚೆಕ್ ಶ್ರೀಮತಿ. ಲಾಲಬಿ ಗಂಡ ಬಾಬಸಾ ಮತ್ತು ರೂ.40,000/- ಗಳ ಚೆಕ್ ಶ್ರೀಮತಿ. ಹುಸೇನಬೀ ಗಂಡ ಹಸನಸಾಬ ಇವರುಗಳಿಗೆ ನೀಡಿರುತ್ತಾರೆ. ಆದರೆ ಈ ಫಲಾನುಭವಿಗಳು ನಿಗದಿತ ಸಾಲಿನಲ್ಲಿ ಮನೆಗಳನ್ನು ನಿರ್ಮಾಣ ಮಾಡದಿದ್ದರೂ ಸಹ ತಮ್ಮ ಹಳೆಯ ಮನೆಗಳ ಮುಂದೆ ನಿಂತು ಫೋಟೋಗಳನ್ನು ತೆಗೆಸಿ ಜಿ.ಪಿ.ಎಸ್ ಮಾಡಿಸಿರುತ್ತಾರೆ ಎಂದು ಆಪಾದಿಸಿದ್ದು, ತಾನು ಕರ್ತವ್ಯದಲ್ಲಿ ನಿಷ್ಕಾಳಜಿತನ ತೋರಿ ಸರ್ಕಾರದ ಯೋಜನೆಯ ಅನುದಾನದ ಹಣವನ್ನು ಬಿಡುಗಡೆ ಮಾಡಿ, ಅವ್ಯವಹಾರ ನಡೆಸಿರುವುದಿಲ್ಲ. ದೂರುದಾರರು ಮಾಡಿರುವ ಆಪಾದನೆಯನ್ನು ಅಲ್ಲಗಳೆಯುತ್ತೇನೆ. ದೂರುದಾರರಾದ ಶ್ರೀ. ಮುತ್ತಣ್ಣ ಮತ್ತು ಶ್ರೀ. ರಂಗನಾಥ ನಾಯಕ್ ಇವರು ತನ್ನ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ. ದೂರುದಾರರು ಸಲ್ಲಿಸಿರುವ ದೂರಿನ ಬಗ್ಗೆ ವಿಚಾರಣೆ ಮಾಡಿದ ತನಿಖಾಧಿಕಾರಿಗಳಾದ ಶ್ರೀ. ಅಯ್ಯನಗೌಡ ಪಾಟೀಲ, ಡಿ.ವೈ.ಎಸ್.ಪಿ, ಕರ್ನಾಟಕ ಲೋಕಯುಕ್ತ, ರಾಯಚೂರು ಇವರು ಸಹ ತನ್ನ ವಿರುದ್ಧ ಸುಳ್ಳು ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ತನ್ನ ಮೇಲೆ ಮಾಡಿದ ಎಲ್ಲಾ ಆಪಾದನೆಗಳು ಸುಳ್ಳಾಗಿರುತ್ತವೆ. ತಾನು ಯಾವುದೇ ದುರ್ನಡತೆಯನ್ನು ಎಸಗಿರುವುದಿಲ್ಲ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದಿಲ್ಲ ಮತ್ತು ತಾನು ಒಳ್ಳೆಯ ನಡತೆಯ ಸರ್ಕಾರಿ ನೌಕರರಾಗಿ ಸೇವೆ ಸಲ್ಲಿಸಿದ್ದು, ಆ ಕಾರಣದಿಂದ ತನ್ನನ್ನು ವಿಚಾರಣೆಯಿಂದ ಕೈಬಿಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

17. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರುಗಳಾದ ಶ್ರೀ. ಮುತ್ತಣ್ಣ ರವರನ್ನು ಪಿ.ಡಬ್ಲ್ಯೂ-1 ಎಂದು, ಶ್ರೀ. ರಂಗನಾಥ್

ನಾಯಕ್ ರವರನ್ನು, ಪಿ.ಡಬ್ಲ್ಯೂ-2 ಎಂದು, ಶ್ರೀ. ಅಯ್ಯನಗೌಡ ಪಾಟೀಲ್, ತನಿಖಾಧಿಕಾರಿ ರವರನ್ನು ಪಿ.ಡಬ್ಲ್ಯೂ-3 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-1 ರಿಂದ ನಿ.ಪಿ-3 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆ (Second Oral Statement) ಯನ್ನು ದಿನಾಂಕ : 22/01/2020 ರಂದು ಪಡೆದುಕೊಳ್ಳಲಾಗಿರುತ್ತದೆ.

18. ಆ.ಸ.ನೌ ರವರು ಸ್ವತ: ಡಿ.ಡಬ್ಲ್ಯೂ-1 ರಂತೆ ಸಾಕ್ಷ್ಯ ನುಡಿದಿದ್ದು, ತಮ್ಮ ಪರವಾಗಿ ನಿಶಾನೆ ಡಿ-1 ರಿಂದ 8 ರವರೆಗೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

19. ಮಂಡನಾಧಿಕಾರಿಯವರ ಮತ್ತು ಆ.ಸ.ನೌ ರವರ ಪರ ವಕೀಲರ ಮೌಖಿಕ ವಾದವನ್ನು ಆಲಿಸಿದೆ.

20. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ-1: ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?**

**ಅಂಶ-2: ಆದೇಶವೇನು?**

21. ವಾದವಿವಾದ ಆಲಿಸಿದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

22. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ-1) ಸಕಾರಾತ್ಮಕವಾಗಿದೆ.**

**ಅಂಶ-2) ಅಂತಿಮ ಆದೇಶದಂತೆ.**

## ಕಾರಣಗಳು

23. **ಅಂಶ-1** : ಈ ಪ್ರಕರಣದಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರುಗಳಾದ ಶ್ರೀ. ಮುತ್ತಣ್ಣ ರವರನ್ನು ಪಿ.ಡಬ್ಲ್ಯೂ-1 ಎಂದು, ಶ್ರೀ. ರಂಗನಾಥ್ ನಾಯಕ್ ರವರನ್ನು ಪಿ.ಡಬ್ಲ್ಯೂ-2 ಎಂದು, ಶ್ರೀ. ಅಯ್ಯನಗೌಡ ಪಾಟೀಲ್, ತನಿಖಾಧಿಕಾರಿ ರವರನ್ನು ಪಿ.ಡಬ್ಲ್ಯೂ-3 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-1 ರಿಂದ ನಿ.ಪಿ-3 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಗುರುತಿಸಿಕೊಳ್ಳಲಾದ ದಾಖಲೆಗಳಲ್ಲಿ ನಿ.ಪಿ-1 ಪ್ರಪತ್ರ-1, ನಿ.ಪಿ-2 ಪ್ರಪತ್ರ-2, ನಿ.ಪಿ-3 ತನಿಖಾಧಿಕಾರಿಗಳು ನೀಡಿದ ವರದಿಯ ದಾಖಲೆಗಳಾಗಿರುತ್ತವೆ.

24. ಪಿ.ಡಬ್ಲ್ಯೂ-1/ಶ್ರೀ. ಮುತ್ತಣ್ಣ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಆ.ಸ.ನೌ ರವರ ಪರಿಚಯವಿದೆ. ತಾನು ಬೆಂಗಳೂರಿನಲ್ಲಿ ಉದ್ಯೋಗ ಮಾಡುತ್ತಿದ್ದು, ಸುಮಾರು 2 ವರ್ಷದ ಹಿಂದೆ ತಮ್ಮ ಗ್ರಾಮದ ಕೆಲವು ವ್ಯಕ್ತಿಗಳು ಬೆಂಗಳೂರಿಗೆ ಬಂದಿದ್ದರು, ಕೆಲವು ದಾಖಲೆಗಳಿಗೆ ಸಹಿ ಮಾಡಲೆಂದು ಕೇಳಿಕೊಂಡ ಕಾರಣ ಸಹಿ ಮಾಡಿರುತ್ತೇನೆ. ಸಾಕ್ಷಿ ಸಹಿಯಿರುವ ದಾಖಲೆಗಳು ಪ್ರಪತ್ರ - 1 ಮತ್ತು 2 ಆಗಿದ್ದು, ಅವುಗಳನ್ನು ನಿ.ಪಿ-1 ಮತ್ತು 2 ಎಂದು ಗುರುತಿಸಿರುತ್ತಾರೆ. ನಿ.ಪಿ.1 ಮತ್ತು 2 ರಲ್ಲಿ ಬರೆದಿರುವ ಯಾವುದೇ ವಿಚಾರವು ತನಗೆ ಗೊತ್ತಿರುವುದಿಲ್ಲ ಎಂದು ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷ್ಯ ನುಡಿದಿರುತ್ತಾರೆ.

25. ಮಂಡನಾಧಿಕಾರಿಯವರು ನಡೆಸಿದ ಪಾಟಿ ಸವಾಲಿನಲ್ಲಿ ಪಿ.ಡಬ್ಲ್ಯೂ-1 ರವರು ಆ.ಸ.ನೌ ರವರು ಪಿ.ಡಿ.ಓ ಆಗಿ ಕರ್ತವ್ಯ ನಿರ್ವಹಿಸುವ ಚಿಕ್ಕಕೊಟ್ಟಿಕಲ್ಲು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ತಾನು ಖಾಯಂ ನಿವಾಸಿಯಾಗಿರುತ್ತೇನೆ ಅಂದರೆ ಸರಿ. ತಮ್ಮ ಗ್ರಾಮದೊಂದಿಗೆ ತಾನು ಸಂಪರ್ಕ ಇಟ್ಟುಕೊಂಡಿರುತ್ತೇನೆ ಅಂದರೆ ಸರಿ. ತಮ್ಮ ಗ್ರಾಮದಲ್ಲಿ ಇಂದಿರಾ ಆವಾಸ್ ಯೋಜನೆ ಹಾಗೂ ಬಸವ ವಸತಿ ಯೋಜನೆಯಡಿ ಮನೆಗಳನ್ನು ನಿರ್ಮಾಣ ಮಾಡಲಾಗಿದೆ ಅಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

26. ಮುಂದುವರೆದ ಪಾಟೀ ಸವಾಲಿನಲ್ಲಿ ಸದರಿ ಯೋಜನೆಗೆ ಸಂಬಂಧಿಸಿದಂತೆ ಆ.ಸ.ನೌ ರವರು ಅಕ್ರಮಗಳನ್ನು ಎಸಗಿರುತ್ತಾರೆ ಅಂದರೆ ಸರಿಯಲ್ಲ. ತಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ತನಗೆ ಕನ್ನಡ ಓದಲು, ಬರೆಯಲು ಬರುತ್ತದೆ ಎಂದರೆ ಸರಿ. ನಿ.ಪಿ-1 ಮತ್ತು 2 ಕ್ಕೆ ತಾನು ಓದಿ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಆ.ಸ.ನೌ ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

27. ಪಿ.ಡಬ್ಲ್ಯೂ-2/ಶ್ರೀ. ರಂಗನಾಥ್ ನಾಯಕ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಆ.ಸ.ನೌ ರವರ ಪರಿಚಯವಿದೆ. ಅವರು ಚಿಕ್ಕಕೊಟ್ಟಿಕಲ್ ಗ್ರಾಮ ಪಂಚಾಯಿತಿಯಲ್ಲಿ ಪಿ.ಡಿ.ಓ. ಆಗಿ ಕಾರ್ಯ ನಿರ್ವಹಿಸಿರುತ್ತಾರೆ. ತನಗೆ ಪ್ರಾ.ಸ.1 ಮುತ್ತಣ್ಣರವರ ಪರಿಚಯವಿದೆ. ಈ ಪ್ರಕರಣದ ಬಗ್ಗೆ ತನಗೆ ಯಾವುದೇ ಮಾಹಿತಿ ಇರುವುದಿಲ್ಲ ಹಾಗೂ ಪ್ರಾ.ಸ-1 ರವರೊಂದಿಗೆ ತಾನು ಲೋಕಾಯುಕ್ತ ಕಚೇರಿಗೆ ಯಾವುದೇ ದೂರನ್ನು ದಾಖಲಿಸಿರುವುದಿಲ್ಲ ಎಂದು ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷ್ಯ ನುಡಿದಿರುತ್ತಾರೆ.

28. ಮಂಡನಾಧಿಕಾರಿಯವರು ನಡೆಸಿದ ಪಾಟೀ ಸವಾಲಿನಲ್ಲಿ ಪಿ.ಡಬ್ಲ್ಯೂ-2 ರವರು ಈಗ ತನಗೆ ತೋರಿಸಲಾದ ಪ್ರಪತ್ರ-1 ಮತ್ತು 2 ರ ಮೇಲಿರುವ ಸಹಿ ತನ್ನದಾಗಿರುತ್ತದೆ ಎಂದರೆ ಸರಿಯಲ್ಲ. ತಮ್ಮ ಗ್ರಾಮದಲ್ಲಿ ಇಂದಿರಾ ಆವಾಸ್ ಯೋಜನೆ ಹಾಗೂ ಬಸವ ವಸತಿ ಯೋಜನೆಯಡಿ ಮನೆಗಳನ್ನು ನಿರ್ಮಿಸಲಾಗಿದೆ ಎಂದರೆ ಸರಿ. ಸದರಿ ಯೋಜನೆಗಳಿಗೆ ಸಂಬಂಧಿಸಿದಂತೆ ಆ.ಸ.ನೌ ರವರು ಅಕ್ರಮಗಳನ್ನು ಎಸಗಿದ್ದು, ಅದರ ಬಗ್ಗೆ ತನಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ಆ.ಸ.ನೌ ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

29. ಪಿ.ಡಬ್ಲ್ಯೂ-3/ಶ್ರೀ. ಅಯ್ಯನಗೌಡ ಪಾಟೀಲ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು 27/02/2017 ರಿಂದ ಡಿವೈಎಸ್‌ಪಿ ಹೊಸಪೇಟೆ ಲೋಕಾಯುಕ್ತ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಹಾಗೂ ದಿನಾಂಕ : 15/07/2017 ರಿಂದ ರಾಯಚೂರು, ಲೋಕಾಯುಕ್ತ ಕಚೇರಿಯ ಪ್ರಭಾರದಲ್ಲಿದ್ದೇನೆ. ಮಾನ್ಯ ಎಆರ್‌ಇ-4/ಜಿಎಲ್‌ಬಿ/2026 ಹಾಗೂ ಜಿಎಲ್‌ಬಿ/2027/2016 ಫಿರ್ಯಾದಿದಾರರು ಮುತ್ತಣ್ಣ ಮತ್ತು ರಂಗನಾಥ್, ಜಾಗೀರ್ ಪನ್ನೂರು, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ ಇವರ ಅರ್ಜಿಯನ್ನು ಆ.ಸ.ನೌ ರವರ ವಿರುದ್ಧ ವಿಚಾರಣೆ ಮಾಡಲು ತನಗೆ ಕಳುಹಿಸಿದ್ದರು. ಈ ಬಗ್ಗೆ ಚಿಕ್ಕಕೊಟ್ನೆಕಲ್ ರ ಪಂಚಾಯಿತಿಗೆ ಪತ್ರ ಬರೆದು, ಅರ್ಜಿಗೆ ಸಂಬಂಧಿಸಿದ ದಾಖಲಾತಿಗಳನ್ನು ಕೇಳಿ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

30. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ **ಆಪಾದನೆ-1,** 2009-10 ನೇ ಸಾಲಿನ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಪಟ್ಟಿಯನ್ನು ಪಡೆದುಕೊಂಡಿರುತ್ತೇನೆ. ಫಲಾನುಭವಿಗಳಾದ ಶ್ರೀಮತಿ. ಹನುಮಂತಿ, ಶ್ರೀಮತಿ. ಅಂಬಮ್ಮ, ಶ್ರೀಮತಿ. ದೇವಮ್ಮ, ಶ್ರೀಮತಿ. ಈಶ್ವರಮ್ಮ ಮತ್ತು ಶ್ರೀಮತಿ. ಲಕ್ಷ್ಮಿ ಇವರು ಚಿಕ್ಕಕೊಟ್ನೆಕಲ್ ಗ್ರಾಮಪಂಚಾಯಿತಿ

ವ್ಯಾಪ್ತಿಯಲ್ಲಿ ಒಳಪಡುವ ಈರಲಘಡ್ಡ ಗ್ರಾಮದ ನಿವಾಸಿಗಳಾಗಿರುತ್ತಾರೆ ಹಾಗೂ ಯೋಜನೆಯಿಂದ ಬಂದ ಹಣವನ್ನು ಬಳಸಿಕೊಂಡು ಸುಮಾರು 6 ರಿಂದ 7 ವರ್ಷಗಳ ಹಿಂದೆಯೇ ಮನೆಯನ್ನು ನಿರ್ಮಿಸಿ ವಾಸವಾಗಿರುತ್ತಾರೆ ಮತ್ತು ಸಂಬಂಧಿಸಿದ ದಾಖಲಾತಿಗಳು ಪಂಚಾಯಿತಿಯಲ್ಲಿ ಲಭ್ಯವಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ, ಅರ್ಜಿದಾರರು ಮಾಡಿರುವ ಈ ಮೇಲಿನ ಆಪಾದನೆ ಸಾಬೀತಾಗಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

31. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ **ಆಪಾದನೆ 2**, 2011-12 ನೇ ಸಾಲಿನ ಇಂದಿರಾ ಆವಾಸ್ ಯೊಜನೆಯು ಫಲಾನುಭವಿಗಳಾದ ಶ್ರೀಮತಿ. ಕಸ್ತೂರಮ್ಮ ಕೋಂ ಶರಣಪ್ಪ ಸಜ್ಜನ ಹಾಗೂ 2012-13 ನೇ ಸಾಲಿನ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಾದ ಶ್ರೀಮತಿ ಸಮ್ಮಜಬೀ ಕೋಂ ಮಹಿಬೂಬಾ ಸಾಬ್ ಇವರು ಹಳೆಯ ಮನೆಯ ಮುಂದೆ ನಿಂತು ಭಾವಚಿತ್ರ ತೆಗೆಸಿ, ಹೊಸಮನೆ ಕಟ್ಟಿಕೊಂಡಂತೆ ಅನುದಾನದ ಹಣವನ್ನು ಪಡೆದುಕೊಂಡಿರುತ್ತಾರೆ ಎಂಬ ಆಪಾದನೆಗೆ ಸಂಬಂಧಿಸಿದಂತೆ ತಾನು ದಾಖಲಾತಿ ಹಾಗೂ ಸ್ಥಳ ಪರಿಶೀಲನೆ ನಡೆಸಿರುತ್ತೇನೆ. ಸ್ಥಳ ಪರಿಶೀಲನೆ ವೇಳೆ ಫಲಾನುಭವಿಗಳಿಗೆ ಸಂಬಂಧಪಟ್ಟ ಮನೆ ಕಂಡು ಬಂದಿರುವುದಿಲ್ಲ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದಾಗ ಫಲಾನುಭವಿಗಳನ್ನು ಬೇರೆ ಮನೆಯ ಮುಂದೆ ನಿಲ್ಲಿಸಿ, ಫೋಟೋಗಳನ್ನು ತೆಗೆಸಿರುವುದು ಕಂಡು ಬಂದಿರುತ್ತದೆ. ಫಲಾನುಭವಿಗಳಿಗೆ ಹಣವನ್ನು ಬಿಡುಗಡೆ ಮಾಡಲಾಗಿರುತ್ತದೆ. ಈ ಮೇಲಿನ ಆಪಾದನೆ ಸಾಬೀತಾಗಿದ್ದು, ಇದಕ್ಕೆ ಆ.ಸ.ನೌ ರವರಾದ ಶ್ರೀ. ವಿಶ್ವನಾಥ್ ಕಾರಣರಾಗಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

32. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ **ಆಪಾದನೆ 3**, 2013 ನೇ ಸಾಲಿನ ಇಂದಿರಾ ಆವಾಸ್ ಯೋಜನೆಯಲ್ಲಿ ಮಾಡಲಾಗಿದೆ ಎನ್ನುವ ಅವ್ಯವಹಾರಗಳು ಸಾಬೀತಾಗಿರುವುದಿಲ್ಲ. **ಆಪಾದನೆ 4**, 2010-11 ನೇ ಸಾಲಿನ ಇಂದಿರಾ ಆವಾಸ್ ಯೋಜನೆಯಲ್ಲಿ ಮಾಡಲಾಗಿದೆ

ಎನ್ನುವ ಅವ್ಯವಹಾರಗಳು ಸಾಬೀತಾಗಿರುವುದಿಲ್ಲ. **ಆಪಾದನೆ 5,** 2011-12 ನೇ ಸಾಲಿನ ಇಂದಿರಾ ಆವಾಸ್ ಯೋಜನೆಯಲ್ಲಿ ಮಾಡಲಾಗಿದೆ ಎನ್ನುವ ಅವ್ಯವಹಾರಗಳು ಸಾಬೀತಾಗಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

33. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ **ಆಪಾದನೆ 6,** 2011-12 ನೇ ಸಾಲಿನ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಾದ ಶ್ರೀಮತಿ. ಫಾತಿಮಾ ಕೋಂ ಮೌಲಾಸಾಬ್, ಶ್ರೀಮತಿ. ಲಾಲಬೀ ಕೋಂ ಬಾಬಾಸಾಬ್, ಶ್ರೀಮತಿ. ಹುಸೇನಬೀ ಕೋಂ ಹಸನಾಸಾಬ್ ಈ ಮೂರು ಜನರು ಮನೆಗಳನ್ನು ಕಟ್ಟಿಸಿಕೊಳ್ಳದೆ ಅನುದಾನವನ್ನು ಬಿಡುಗಡೆ ಮಾಡಿಸಿಕೊಂಡಿರುತ್ತಾರೆ ಎಂಬ ಆಪಾದನೆಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ನಡೆಸಿದಾಗ, ಜಾಗೀರಾ ಪನ್ನೂರ ಗ್ರಾಮದಲ್ಲಿ ಈ ಮೇಲಿನ ಫಲಾನುಭವಿಗಳಿಗೆ ಸಂಬಂಧಿಸಿದ ಮನೆಗಳು ಪತ್ತೆಯಾಗಿರುವುದಿಲ್ಲ ಹಾಗೂ ಅವರು ಮನೆಯನ್ನು ಕಟ್ಟಿಸಿ ಕೊಂಡಿರುವುದಿಲ್ಲವೆಂದು ಸ್ಥಳೀಯರ ವಿಚಾರಣೆಯಿಂದ ತಿಳಿದು ಬಂದಿರುತ್ತದೆ ಹಾಗೂ ಆ.ಸ.ನೌ ರವರು ಶ್ರೀಮತಿ. ಫಾತಿಮಾ ರವರಿಗೆ ರೂ.75,000/- ಗಳನ್ನು, ಶ್ರೀಮತಿ. ಲಾಲಬೀ ರವರಿಗೆ ರೂ.35,000/- ಗಳನ್ನು, ಶ್ರೀಮತಿ. ಹುಸೇನಬೀ ಇವರಿಗೆ ರೂ.35,000/- 1 ಮತ್ತು 2 ನೇ ಹಂತದ ಹಣವನ್ನು ಬಿಡುಗಡೆಗೊಳಿಸಿರುವುದು ಪರಿಶೀಲನೆಯಿಂದ ಸಾಬೀತಾಗಿರುತ್ತದೆ. ಶ್ರೀಮತಿ. ಲಾಲಬೀ ರವರಿಗೆ ರೂ.40,000/- ಹಾಗೂ ಶ್ರೀಮತಿ. ಹುಸೇನಬೀ ರವರಿಗೆ ರೂ.40,000/- ಹಣವನ್ನು 3 ಮತ್ತು 4 ನೇ ಹಂತದಲ್ಲಿ ಶ್ರೀ. ಮಾನಸಪ್ಪ, ಕಾರ್ಯದರ್ಶಿ, ಗ್ರಾಮ ಪಂಚಾಯಿತಿ, ಚಿಕ್ಕಕೊಟ್ನೆಕಲ್ ರವರು ಬಿಡುಗಡೆಗೊಳಿಸಿರುವುದು ಪರಿಶೀಲನೆಯಿಂದ ಸಾಬೀತಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

34. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ **ಆಪಾದನೆ 7,** ಇಂದಿರಾ ಆವಾಸ್ ಯೋಜನೆಯಲ್ಲಿ ಬಸವರಾಜ ಎಂಬ ಫಲಾನುಭವಿಗೆ ನೀಡಲಾದ ಮನೆಯನ್ನು ಕೆಡವಿಗುತ್ತಾರೆ ಎಂಬ ಆಪಾದನೆಯನ್ನು ಪರಿಶೀಲಿಸಿದಾಗ, ಸದರಿ ಬಸವರಾಜರವರು ಮೃತ ಪಟ್ಟಿದ್ದು, ಅವರ ತಂದೆಯಾದ ಈರಪ್ಪ ರವರು ಮನೆಯಲ್ಲಿ ವಾಸ್ತು ದೋಷವಿದೆ ಎಂಬ ಕಾರಣದಿಂದ ಮನೆಯನ್ನು ಕೆಡವಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಆ.ಸ.ನೌ ರವರ ಮೇಲೆ ಮಾಡಲಾದ ಆರೋಪ ಸಾಬೀತಾಗಿರುವುದಿಲ್ಲ. ತಾನು ನೀಡಿದಂತಹ ವರದಿಯನ್ನು ನೋಡುತ್ತಿದ್ದು, ಅದನ್ನು **ನಿ.ಹಿ.3** ಎಂದು ಗುರುತಿಸಿರುತ್ತಾರೆ.

35. ಆ.ಸ.ನೌ ರವರ ಪರ ವಕೀಲರು ನಡೆಸಿದ ಪಾಟೀ ಸವಾಲಿನಲ್ಲಿ ಫಲಾನುಭವಿಗಳನ್ನು ಯಾವ ನಿಯಮ, ಯಾವ ಮಾರ್ಗದರ್ಶಿಯಲ್ಲಿ ಎಷ್ಟನೇ ಕಂಡಿಕೆಯಲ್ಲಿ ಆಯ್ಕೆ ಮಾಡಲಾಗಿತ್ತು ಎಂಬ ಪ್ರಶ್ನೆಗೆ ಸದರಿ ಫಲಾನುಭವಿಗಳನ್ನು ಇಂದಿರಾ ಆವಾಸ್ ಯೋಜನೆಯಡಿ ಆಯ್ಕೆ ಮಾಡಲಾಗಿತ್ತು ಎಂದು ಉತ್ತರಿಸಿರುತ್ತಾರೆ. ತಾವು ಯಾವುದಾದರೂ ದಾಖಲಾತಿಗಳನ್ನು ಪರಿಶೀಲಿಸಿದ್ದೀರಾ ಎಂಬ ಪ್ರಶ್ನೆಗೆ ತನಿಖಾ ಕಾಲಕ್ಕೆ ಒದಗಿಸಲಾದ ದಾಖಲಾತಿಗಳನ್ನು ಪರಿಶೀಲಿಸಿದ್ದೇನೆ ಎಂದು ಉತ್ತರಿಸಿರುತ್ತಾರೆ. ತಾನು ಸದರಿ ಮಾರ್ಗಸೂಚಿ ಹಾಗೂ ಸುತ್ತೋಲೆಗಳನ್ನು ಹಾಜರುಪಡಿಸಿಲ್ಲ ಅಂದರೆ ತನಗೆ ಈಗ ಅದು ನೆನಪಿಲ್ಲ. ತಾನು ಸದರಿ ದಾಖಲಾತಿಗಳನ್ನು ತನಿಖಾ ಕಾಲಕ್ಕೆ ನೋಡದೇ ಇರುವ ಕಾರಣ, ಅವುಗಳನ್ನು ಇಲ್ಲಿ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

36. ಮುಂದುವರೆದ ಪಾಟೀ ಸವಾಲಿನಲ್ಲಿ ಆ.ಸ.ನೌ ರವರಿಗೆ ನೋಟೀಸ್ ಕೊಟ್ಟು ತನಿಖಾ ಕಾಲದಲ್ಲಿ ವಿಚಾರಿಸಿದ್ದೀರಾ ಎಂಬ ಪ್ರಶ್ನೆಗೆ ಆ.ಸ.ನೌ ರವರಿಗೆ ತಾನು ಮೌಖಿಕವಾಗಿ ನೋಟೀಸ್ ನೀಡಿದ್ದು, ಆದರೆ ಲಿಖಿತವಾಗಿ ನೋಟೀಸ್ ನೀಡಿಲ್ಲ ಎಂದು ಉತ್ತರಿಸಿರುತ್ತಾರೆ. ತಾನು ಆ.ಸ.ನೌ ರವರಿಗೆ ಯಾವುದೇ ನೋಟೀಸ್ ನೀಡಿಲ್ಲ ಹಾಗೂ ಸ್ಥಳ ಪರಿಶೀಲನೆ ಕಾಲಕ್ಕೆ

ಅವರನ್ನು ಕರೆಯಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಫಲಾನುಭವಿಗಳಿಗೆ 4 ಹಂತಗಳಲ್ಲಿ ಹಣ ಬಿಡುಗಡೆ ಮಾಡಲಾಗುತ್ತದೆ. ತನಗೆ ಯಾವ ಯಾವ ಹಂತದಲ್ಲಿ ಹಣ ಬಿಡುಗಡೆ ಮಾಡಲಾಗುತ್ತದೆ ಎಂದು ಈಗ ನೆನಪಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

37. ಮುಂದುವರೆದ ಪಾಟೀ ಸವಾಲಿನಲ್ಲಿ ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡುವ ಮುಂಚೆ ಏನು ಪ್ರಕ್ರಿಯೆ ಅಳವಡಿಸುತ್ತಾರೆ ಎಂಬ ಪ್ರಶ್ನೆಗೆ ಫಲಾನುಭವಿಗಳಿಗೆ ಅನುದಾನವನ್ನು ಅಡಿಪಾಯ ಮುಗಿದ ನಂತರ, ಲಿಂಟಲ್ ಲೆವೆಲ್, ಚತ್ ಲೆವೆಲ್‌ನಲ್ಲಿ ಚೆಕ್ ಮುಖಾಂತರ ಹಣ ಬಿಡುಗಡೆ ಮಾಡುತ್ತಾರೆ ಎಂದು ಉತ್ತರಿಸಿರುತ್ತಾರೆ. ಫಲಾನುಭವಿಗಳಿಗೆ ಹಣವನ್ನು ಬಿಡುಗಡೆ ಮಾಡುವ ಮೊದಲು ಹಂತ ಹಂತವಾದ ಫೋಟೋಗಳನ್ನು ಹಾಗೂ ದಾಖಲಾತಿಗಳನ್ನು ಗ್ರಾಮ ಪಂಚಾಯಿತಿ ಸಭೆಯಲ್ಲಿ ಪಿ.ಡಿ.ಓ ರವರು ಮಂಡಿಸಿ, ಅದರ ಅನುಮೋದನೆ ಪಡೆದ ನಂತರ ಹಣ ಬಿಡುಗಡೆ ಮಾಡಲಾಗುತ್ತದೆ ಅಂದರೆ ಆ ವಿಷಯ ತನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

38. ಮುಂದುವರೆದ ಪಾಟೀ ಸವಾಲಿನಲ್ಲಿ 2009-10ನೇ ಸಾಲಿನ ಸೆಪ್ಟೆಂಬರ್ 29 ಮತ್ತು 30 ರಂದು ಅತೀ ವೃಷ್ಟಿಯಾದ ಕಾರಣ, ಗ್ರಾಮವೇ ಮಳೆ ನೀರಿಯಲ್ಲಿ ನಿಂತಿದ್ದು, ಆ ಸಮಯದಲ್ಲಿ ಫಲಾನುಭವಿಗಳ ಮನೆಗಳು ಕೊಚ್ಚಿಕೊಂಡು ಹೋಗಿದ್ದವು ಹಾಗೂ ಯಾವುದೇ ಮನೆಗಳು ಉಳಿದಿರಲಿಲ್ಲ ಅಂದರೆ ಸರಿಯಲ್ಲ. ಫಲಾನುಭವಿಗಳನ್ನು ಅತೀವೃಷ್ಟಿಯಾದ ಕಾರಣ, ಸರ್ಕಾರವು ಗಂಜಿ ಕೇಂದ್ರದಲ್ಲಿ ರಕ್ಷಣೆ ಕೊಟ್ಟಿದ್ದರು ಅಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

39. ಮುಂದುವರೆದ ಪಾಟೀ ಸವಾಲಿನಲ್ಲಿ ಫಲಾನುಭವಿಗಳಾದ ಶ್ರೀಮತಿ. ಕಸ್ತೂರಮ್ಮ ಹಾಗೂ ಶ್ರೀಮತಿ. ಸಮ್ಮಜಭೀ ಇವರು ಯಾರದೋ ಹಳೇ ಮನೆಗಳ ಮುಂದೆ ನಿಂತು ಫೋಟೋ ತೆಗೆಸಿದ ಬಗ್ಗೆ ತಾವು ಯಾರನ್ನಾದರೂ ವಿಚಾರಣೆ ಮಾಡಿದ್ದೀರಾ ಎಂಬ ಪ್ರಶ್ನೆಗೆ

ಫಲಾನುಭವಿಗಳಾದ ಶ್ರೀಮತಿ. ಕಸ್ತೂರಮ್ಮ ಹಾಗೂ ಶ್ರೀಮತಿ. ಸಮ್ಮಜಭೀ ಇವರು ತಮ್ಮದೇ ಹಳೇ ಮನೆಗಳ ಮುಂದೆ ನಿಂತು, ಫೋಟೋ ತೆಗೆಸಿಕೊಂಡಿದ್ದು, ಈ ಬಗ್ಗೆ ಅವರನ್ನು ವಿಚಾರಣೆ ಮಾಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

40. ಮುಂದುವರೆದ ಪಾಟೀ ಸವಾಲಿನಲ್ಲಿ ಸದರಿ ಫಲಾನುಭವಿಗಳ ಹೇಳಿಕೆಗಳನ್ನು ಪಡೆದಿದ್ದೀರಾ? ಎಂಬ ಪ್ರಶ್ನೆಗೆ, ಇಲ್ಲ, ಕೇವಲ ಮೌಖಿಕವಾಗಿ ಹೇಳಿಕೆ ಪಡೆದಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಸದರಿ ಫಲಾನುಭವಿಗಳಿಂದ ಯಾವುದೇ ದಾಖಲಾತಿಗಳನ್ನು ತಾನು ಪಡೆದ ಬಗ್ಗೆ ತನಗೆ ನೆನಪಿರುವುದಿಲ್ಲ. ತನ್ನ ವರದಿಯೊಂದಿಗೆ ಅವರ ದಾಖಲಾತಿಗಳನ್ನು ಲಗತ್ತಿಸಿದ ಬಗ್ಗೆ ನೆನಪಿರುವುದಿಲ್ಲ. ತಾನು ಯಾವುದೇ ಸ್ಥಳ ಪರಿಶೀಲನೆ ಮಾಡಿಲ್ಲ ಅಂದರೆ ಸರಿಯಲ್ಲ. ಸದರಿ ಗ್ರಾಮಗಳಲ್ಲಿ ಹೊಸ ಮನೆಗಳು ನಿರ್ಮಾಣ ಮಾಡಿದ್ದರೂ ಸಹ ಹಳೇ ಮನೆಗಳು ಅಂತ ತಾನು ಸುಳ್ಳು ವರದಿ ನೀಡಿದ್ದೇನೆ ಅಂದರೆ ಸರಿಯಲ್ಲ. ಸ್ಥಳೀಯರನ್ನು ಮೌಖಿಕವಾಗಿ ಮಾತ್ರ ವಿಚಾರಣೆ ಮಾಡಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

41. ಮುಂದುವರೆದ ಪಾಟೀ ಸವಾಲಿನಲ್ಲಿ ಆ.ಸ.ನೌ ವಿಶ್ವನಾಥ್ ರವರು ಶ್ರೀಮತಿ. ಕಸ್ತೂರಮ್ಮ ಹಾಗೂ ಸಮ್ಮಜಭೀ ರವರಿಗೆ ಎಷ್ಟು ಹಂತದ ಅನುದಾನವನ್ನು ಬಿಡುಗಡೆ ಮಾಡಿರುತ್ತಾರೆ ಎಂದ ಪ್ರಶ್ನೆಗೆ ಆ.ಸ.ನೌ ವಿಶ್ವನಾಥ್ ರವರು ಫಲಾನುಭವಿಗಳಾದ ಕಸ್ತೂರಮ್ಮ ಹಾಗೂ ಸಮ್ಮಜಭೀ ರವರಿಗೆ ಹಳೇ ಮನೆಗಳ ಮುಂದೆ ನಿಂತು ಫೋಟೋ ತೆಗೆದುಕೊಂಡು, 4 ಹಂತಗಳಲ್ಲಿ ಹಣ ಬಿಡುಗಡೆ ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಆ.ಸ.ನೌ ರವರು 4 ಹಂತದ ಹಣವನ್ನು ಶ್ರೀಮತಿ. ಕಸ್ತೂರಮ್ಮ ಹಾಗೂ ಸಮ್ಮಜಭೀ ರವರಿಗೆ ಬಿಡುಗಡೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 4 ಹಂತದ ರೂ.75,000/-ಗಳನ್ನು ಬಿಡುಗಡೆ ಮಾಡಿದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

42. ಮುಂದುವರೆದ ಪಾಟೀ ಸವಾಲಿನಲ್ಲಿ ಆ.ಸ.ನೌ ರವರು ಮನೆ ನಿರ್ಮಾಣದ ಹಂತಗಳನ್ನು ಜಿ.ಪಿ.ಎಸ್ ಆಧಾರಿತ ಛಾಯಾಚಿತ್ರಗಳನ್ನು ಪಡೆದು, ಹಣ ಬಿಡುಗಡೆ ಮಾಡಿದ್ದಾರೆ ಅಂದರೆ ಸರಿಯಲ್ಲ. ತನ್ನ ತನಿಖೆಯಿಂದ ಆ.ಸ.ನೌ ರವರು ನಿರಪರಾಧಿಯೆಂದು ಕಂಡು ಬಂದರೂ ಸಹ ಸುಳ್ಳು ವರದಿ ನೀಡಿದ್ದೇನೆ ಅಂದರೆ ಸರಿಯಲ್ಲ. ಆಪಾದನೆ 6 ರಲ್ಲಿನ ಫಲಾನುಭವಿಗಳಿಗೆ ಹಣ ನೀಡುವ ವಿಷಯವಾಗಿ ಆ.ಸ.ನೌ ರವರು ಯಾವುದೇ ತಪ್ಪು ಮಾಡಿಲ್ಲ ಅಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

43. ಮುಂದುವರೆದ ಪಾಟೀ ಸವಾಲಿನಲ್ಲಿ ತಾನು ಸ್ಥಳ ಪರಿಶೀಲನೆ ಕಾಲಕ್ಕೆ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಆ.ಸ.ನೌ ರವರು ಆಪಾದನೆ 6 ಕ್ಕೆ ಸಂಬಂಧಿಸಿದಂತೆ, ಮೊದಲ 2 ಹಂತದ ಚೆಕ್ಕುಗಳನ್ನು ನೀಡಿದ್ದಾರೆ ಅಂದರೆ ಸರಿಯಲ್ಲ. ಇನ್ನೆರಡು ಹಂತದ ಹಣವನ್ನು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮಾನಸಪ್ಪ ರವರು ಬಿಡುಗಡೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಮಾನಸಪ್ಪ ರವರು ಶ್ರೀಮತಿ. ಲಾಲಬೀ ಹಾಗೂ ಶ್ರೀಮತಿ. ಹುಸೇನ್‌ಬೀ ರವರಿಗೆ 3 ಮತ್ತು 4 ನೇ ಹಂತದ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ ಅನ್ನೋದು ನಿಜ ಎಂದು ಸಾಕ್ಷ್ಯ ನುಡಿದಿರುತ್ತಾರೆ.

44. ಮುಂದುವರೆದ ಪಾಟೀ ಸವಾಲಿನಲ್ಲಿ ಸದರಿ ಮಾನಸಪ್ಪರವರು ಕೊನೆಯ ಹಂತದಲ್ಲಿ ಹಣ ಬಿಡುಗಡೆ ಮಾಡಿದ ಕಾರಣ ಅವರೇ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ, ಹಣ ಬಿಡುಗಡೆ ಮಾಡಬೇಕಾಗುತ್ತದೆ ಅಂದರೆ ಸರಿಯಲ್ಲ. ಆ.ಸ.ನೌ ರವರು 1 ಮತ್ತು 2 ನೇ ಹಂತದ ಅನುದಾನವನ್ನು ನಿಯಮಾನುಸಾರ ಬಿಡುಗಡೆ ಮಾಡಿದ್ದಾರೆ ಹಾಗೂ ಹಂತ ಹಂತವಾಗಿ ಜಿ.ಪಿ.ಎಸ್. ಆಧಾರಿತ ಫೋಟೋಗಳನ್ನು ಪಡೆದಿದ್ದಾರೆ ಅಂದರೆ ಸರಿಯಲ್ಲ. ಸರ್ಕಾರದ ಲೆಕ್ಕಪತ್ರ ಆದ ನಂತರವೇ ಆ.ಸ.ನೌ ರವರು ಹಣ ಬಿಡುಗಡೆ ಮಾಡಿದ್ದು, ತನ್ನ

ತನಿಖೆಯಿಂದ ಕಂಡು ಬಂದಿದ್ದರೂ ಸಹ ಸುಳ್ಳು ವರದಿ ನೀಡಿದ್ದೇನೆ ಅಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

45. ಆ.ಸ.ನೌ ರವರು ಡಿ.ಡಬ್ಲ್ಯೂ-1 ರವರಂತೆ ಸಾಕ್ಷ್ಯ ನುಡಿದಿರುತ್ತಾರೆ. ಡಿ.ಡಬ್ಲ್ಯೂ-1 ರವರು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಆ.ಸ.ನೌ ರವರು ದೋಷಾರೋಪಣೆಯಲ್ಲಿ ಮಾಡಿದ ಆಪಾದನೆಯ ಅಂಶಗಳನ್ನು ಅಲ್ಲಗೆಳೆದಿರುತ್ತಾರೆ. ಆ.ಸ.ನೌ ರವರು ದಿನಾಂಕ: 22/11/2010 ರಿಂದ 31/03/2014 ರವರೆಗೆ ಪ್ರಭಾರಿಯಾಗಿ ಚೆಕ್ಕ ಕೊಟ್ನೆಕಲ್, ಮಾಸ್ಕಿ ತಾಲ್ಲೂಕು, ರಾಯಚೂರು ಜಿಲ್ಲೆ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದೇನೆ. 2009 ರಿಂದ 2013 ರ ಇಂದಿರಾ ಆವಾಸ್ ಯೋಜನೆ ಮತ್ತು ಬಸವ ವಸತಿ ಯೋಜನೆ ಅಡಿಯಲ್ಲಿ ಈ ಕೆಳಕಂಡ ಫಲಾನುಭವಿಗಳ ಮನೆ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆಯಾಗಿದ್ದು ಇರುತ್ತದೆ. ಈ ಯೋಜನೆ ಅಡಿಯಲ್ಲಿ ಅನುದಾನ ಬಿಡುಗಡೆಯಾಗಿದ್ದು ಇರುತ್ತದೆ. ಈ ಯೋಜನೆ ಅಡಿಯಲ್ಲಿ ಅನುದಾನ ಬಿಡುಗಡೆಯಾದ ಫಲಾನುಭವಿಗಳ ಮನೆ ನಿರ್ಮಾಣ ಮಾಡುವಾಗ ಒಟ್ಟು 4 ಹಂತಗಳನ್ನಾಗಿ ವಿಂಗಡಿಸಲಾಗಿ ಅವು ಯಾವುವೆಂದರೆ ತಳ ಹಂತ – ರೂ. 15,000/- ಗೋಡೆ ಹಂತ - ರೂ.15,000/-, ಛಾವಣಿ ಹಂತ- ರೂ. 20,000/- ಮುಕ್ತಾಯ ಹಂತ - ರೂ. 25,000/- ಒಟ್ಟು ರೂ. 75,000/- ಯಲ್ಲಿ ಮನೆ ನಿರ್ಮಾಣ ಮಾಡಿಕೊಳ್ಳಬೇಕೆಂದು ಠರಾವಿನಲ್ಲಿ ಹೊರಡಿಸಲಾಗಿದೆ. ಫಲಾನುಭವಿಯಾದ ಕಸ್ತೂರಿಬಾ ರವರ ಮನೆ ನಿರ್ಮಾಣವಾಗಿದ್ದು, ಸದರಿ ಫಲಾನುಭವಿಯ 4 ಹಂತದ ಫೋಟೋಗಳನ್ನು ಹಾಜರು ಮಾಡಲಾಗಿದೆ. 4 ಹಂತ ಮುಗಿದು ಮನೆ ಮುಕ್ತಾಯವಾದ ನಂತರ ಜಿಪಿಎಸ್ ಮಾಡಿ ಅಡಿಟ್ ಮಾಡಿ, ಆಡಿಟ್‌ನಲ್ಲಿ ಓಕೆ ಆದ ನಂತರ ಅವರಿಗೆ ಚೆಕ್ ಮೂಲಕ ಹಣವನ್ನು ಬಿಡುಗಡೆ ಮಾಡಿದ್ದು ಇರುತ್ತದೆ. ಫಲಾನುಭವಿಯಾದ ಲಾಲಬಿ ಮತ್ತು ಫಾತಿಮಾ ರವರ ಮನೆ ನಿರ್ಮಾಣದ ಎರಡು ಹಂತದ ಫೋಟೋಗಳನ್ನು ಹಾಜರು ಮಾಡುತ್ತಿದ್ದು, ಎರಡು ಹಂತದ

ಹಣವನ್ನು ಮಾರ್ಗಸೂಚಿ ಪ್ರಕಾರ ಹಣವನ್ನು ಚೆಕ್ ಮೂಲಕ ಬಿಡುಗಡೆ ಮಾಡಿದ್ದು ಇರುತ್ತದೆ. ಫಲಾನುಭವಿಯಾದ ಲಾಲಬಿ, ಫಾತಿಮಾ, ಹುಸೇನಬಿ ರವರ ಜಿಪಿಎಸ್ ನಲ್ಲಿ ಫೋಟೋಗಳು ಇಲ್ಲ. ಏಕೆಂದರೆ ಜಿಪಿಎಸ್ ತಂತ್ರಾಂಶ ತಾಂತ್ರಿಕ ದೋಷದಿಂದ ಜಿಪಿಎಸ್ ಬಂದಿರುವುದಿಲ್ಲ. ತಾನು ಅನೇಕ ಬಾರಿ ಪತ್ರದ ಮೂಲಕ ಮೇಲಾಧಿಕಾರಿಗಳಿಗೆ ತಾಂತ್ರಿಕ ದೋಷದ ಬಗ್ಗೆ ಪತ್ರ ಬರೆದಿದ್ದು ಇರುತ್ತದೆ. ದಿನಾಂಕ: 28/09/2009 ಮತ್ತು 29/09/2009 ರಂದು ಆದ ಬಾರಿ ಮಳೆಯಿಂದ ಚಿಕ್ಕಕೊಟ್ನೆಕಲ್ ಗ್ರಾಮದಲ್ಲಿ ನೆರೆ ಪ್ರವಾಹ ಬಂದಿದ್ದರಿಂದ ಎಲ್ಲಾ ಮನೆಗಳು ಜಲಾವೃತವಾಗಿ ನೆಲಸಮವಾಗಿರುತ್ತವೆ. ಆದ ಕಾರಣ ದಿನಾಂಕ: 29/09/2009 ರಂದು ಸರ್ಕಾರದಿಂದ ಗಂಜಿ ಕೇಂದ್ರವನ್ನು ಮೂರು ದಿನಗಳ ಕಾಲ ಅಂದರೆ ದಿನಾಂಕ: 30/09/2009, 01/10/2009, 02/10/2009 ರವರೆಗೆ ತೆರೆದಿದ್ದು ಇರುತ್ತದೆ. ಆದ ಕಾರಣ ಆರ್ಟಿಕಲ್ ಆಫ್ ಚಾರ್ಜ್‌ನಲ್ಲಿ ಆಪಾದನೆ ಅಂದರೆ ಹಳೆ ಮನೆಗಳ ಮುಂದೆ ನಿಂತು ಫೋಟೋ ತೆಗೆಯಲಾಗಿದೆ ಎಂಬ ಅಂಶ ಶುದ್ಧ ಸುಳ್ಳಾಗಿರುತ್ತದೆ. ನೆರೆ ಪ್ರವಾಹದಿಂದ ಮನೆಗಳು ಜಲಾವೃತವಾದ ಕಾರಣ ಸದರಿ ಗ್ರಾಮದಲ್ಲಿ ಎಲ್ಲಾ ಮನೆಗಳು ನೆಲಸಮವಾಗಿದ್ದು ಇರುತ್ತದೆ. ಎಲ್ಲಾ ಮನೆಗಳು ನೆಲ ಸಮವಾದಾಗ ಹಳೆ ಮನೆಗಳು ಮುಂದೆ ನಿಂತು ಫೋಟೋ ತೆಗೆಯಲಾಗಿದೆ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ. ನಂತರ ದಿನಾಂಕ: 31/03/2014 ರಂದು ತನಗೆ ನೆರವಾರ ಗ್ರಾಮ ಪಂಚಾಯತಿಗೆ ವರ್ಗಾವಣೆಯಾಗಿದ್ದು, ನಂತರ ಬಂದ ಪಿ.ಡಿ.ಓ ಆದ ಶ್ರೀ. ಮಾನಸಪ್ಪ ರವರು ಎರಡು ಹಂತದ ಚೆಕ್‌ಗಳನ್ನು ವಿತರಿಸಿರುತ್ತಾರೆ. ಈ ಕೇಸಿನಲ್ಲಿ ಮಾಡಿದ ಎಲ್ಲಾ ಆಪಾದನೆಗಳು ಸುಳ್ಳಾಗಿದ್ದು, ತಾನು ತನ್ನ ಕೆಲಸದಲ್ಲಿ ಯಾವುದೇ ಕರ್ತವ್ಯ ಲೋಪ ಮಾಡಿರುವುದಿಲ್ಲ ಎಂದು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತಾರೆ ಹಾಗೂ ಈ ಕೆಳಕಂಡಂತೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

1) ಫಲಾನುಭವಿಯಾದ ಶ್ರೀಮತಿ ಕಸ್ತೂರಮ್ಮ ಇವರಿಗೆ ಹಂತ ಹಂತವಾಗಿ ತೆಗೆದ ಛಾಯಾ ಚಿತ್ರಗಳು, ಹಾಗೂ ಜಿಪಿಎಸ್ ಮಾಡಿದ ದಾಖಲೆಗಳನ್ನು ಒಟ್ಟಾಗಿ ನಿಶಾನೆ ಡಿ-1 ಎಂದು ಗುರುತಿಸಿರುತ್ತಾರೆ.

2) ಫಲಾನುಭವಿಯಾದ ಶ್ರೀಮತಿ ಸಮ್ಮಜಭಿ ಇವರಿಗೆ ಹಂತ ಹಂತವಾಗಿ ತೆಗೆದ ಛಾಯಾ ಚಿತ್ರಗಳು, ಹಾಗೂ ಜಿಪಿಎಸ್ ಮಾಡಿದ ದಾಖಲೆಗಳನ್ನು ಒಟ್ಟಾಗಿ ನಿಶಾನೆ ಡಿ–2 ಎಂದು ಗುರುತಿಸಿರುತ್ತಾರೆ.

3) ಫಲಾನುಭವಿಯಾದ ಶ್ರೀಮತಿ. ಲಾಲ್‌ಬಿ ಇವರಿಗೆ ಹಂತ ಹಂತವಾಗಿ ತೆಗೆದ ಛಾಯಾ ಚಿತ್ರಗಳು, ಹಾಗೂ ಜಿಪಿಎಸ್ ಮಾಡಿದ ದಾಖಲೆಗಳನ್ನು ಒಟ್ಟಾಗಿ ನಿಶಾನೆ ಡಿ–3 ಎಂದು ಗುರುತಿಸಿರುತ್ತಾರೆ.

4) ಫಲಾನುಭವಿಯಾದ ಶ್ರೀಮತಿ. ಫಾತಿಮಾ ಇವರಿಗೆ ಹಂತ ಹಂತವಾಗಿ ತೆಗೆದ ಛಾಯಾ ಚಿತ್ರಗಳು, ಹಾಗೂ ಜಿಪಿಎಸ್ ಮಾಡಿದ ದಾಖಲೆಗಳನ್ನು ಒಟ್ಟಾಗಿ ನಿಶಾನೆ ಡಿ–4 ಎಂದು ಗುರುತಿಸಿರುತ್ತಾರೆ.

5) ಫಲಾನುಭವಿಯಾದ ಶ್ರೀ. ಹುಸೇನ್‌ಬಿ ಇವರಿಗೆ ಹಂತ ಹಂತವಾಗಿ ತೆಗೆದ ಛಾಯಾ ಚಿತ್ರಗಳು, ಹಾಗೂ ಜಿಪಿಎಸ್ ಮಾಡಿದ ದಾಖಲೆಗಳನ್ನು ಒಟ್ಟಾಗಿ ನಿಶಾನೆ ಡಿ–5 ಎಂದು ಗುರುತಿಸಿರುತ್ತಾರೆ.

6) ಜಿ.ಪಿ.ಎಸ್ ತಾಂತ್ರಿಕ ದೋಷದ ಕುರಿತು ತಾನು ತಾಲ್ಲೂಕಾ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಬರೆದ ಪತ್ರದ ಜೆರಾಕ್ಸ್ ಪ್ರತಿಯನ್ನು ನಿಶಾನೆ ಡಿ–6 ಎಂದು ಗುರುತಿಸಿರುತ್ತಾರೆ.

7) ಗ್ರಾಮ ಪಂಚಾಯತಿ ಠರಾವಿನ ದೃಢೀಕೃತ ನಕಲನ್ನು ನಿಶಾನೆ ಡಿ–7 ಎಂದು ಗುರುತಿಸಿರುತ್ತಾರೆ.

8) ಗಂಜಿ ಕೇಂದ್ರ ತೆರೆದ ಬಗ್ಗೆ ದೃಢೀಕರಣ ಪತ್ರವನ್ನು ನಿಶಾನೆ ಡಿ–8 ಎಂದು ಗುರುತಿಸಿರುತ್ತಾರೆ.

46. ಮಂಡನಾಧಿಕಾರಿಯವರು ಡಿ.ಡಬ್ಲ್ಯೂ-1 ರವರನ್ನು ವಿಚಾರಣೆಗೊಳಪಡಿಸಿದ ಪಾಟೀ ಸವಾಲಿನಲ್ಲಿ ಇಂದಿರಾ ಆವಾಜ್. ಯೋಜನೆ ಹಾಗೂ ಬಸವ ವಸತಿ ಯೋಜನೆಯಡಿ ಮನೆ ನಿರ್ಮಾಣ ಮಾಡಿದ ಫಲಾನುಭವಿಗಳಿಗೆ ಒಟ್ಟು 4 ಹಂತಗಳಲ್ಲಿ ಹಣ ಬಿಡುಗಡೆ ಮಾಡಲಾಗುತ್ತದೆ ಅನ್ನೋದು ನಿಜ. ಪ್ರತಿ ಹಂತದಲ್ಲೂ ಸದರಿ ಕಟ್ಟಡದ ಫೋಟೋ ತೆಗೆದು ಜಿ.ಪಿ.ಎಸ್. ಆಧಾರದ ಮೇಲೆ ಅಪ್‌ಲೋಡ್ ಮಾಡಿದ ನಂತರ ಹಣ ಬಿಡುಗಡೆ ಮಾಡಲಾಗುವುದು ಅನ್ನೋದು ನಿಜ. ನೀವು ಪ್ರತಿ ಹಂತದ ಛಾಯಾಚಿತ್ರಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

47. ಸಾಕ್ಷಿಯು ಮುಂದುವರೆದು ಜಿ.ಪಿ.ಎಸ್ ತಂತ್ರಜ್ಞಾನವನ್ನು ದಿನಾಂಕ:31/12/2013 ರಂದು ಅಳವಡಿಸಲಾಗಿದೆ. ತಾನು ಹಾಜರುಪಡಿಸಿದ ಛಾಯಾಚಿತ್ರಗಳಲ್ಲಿ ಪ್ರತಿ ಹಂತದ ಪ್ರತ್ಯೇಕ ಫೋಟೋಗಳು ಇಲ್ಲ ಅನ್ನುವುದು ನಿಜ. ಸಾಕ್ಷಿಯು ಮುಂದುವರೆದು ಒಂದೇ ಫೋಟೋದಲ್ಲಿ ಎರಡೆರಡು ಹಂತದ ಫೋಟೋಗಳಿವೆ ಎಂದು ನುಡಿದಿರುತ್ತಾರೆ. ಒಂದು ಹಂತ ಮುಗಿದ ನಂತರ ಅದರ ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ ಅನ್ನೋದು ನಿಜ. ಒಂದು ಹಂತ ಮುಗಿದಿದೆ ಅಂತ ತೋರಿಸಲು ಆ ಹಂತದ ಛಾಯಾಚಿತ್ರ ಬೇಕು ಅನ್ನೋದು ನಿಜ ಎಂದು ಸಾಕ್ಷ್ಯ ನುಡಿದಿರುತ್ತಾರೆ.

48. ಸಾಕ್ಷಿಯು ಮುಂದುವರೆದು ಕಸ್ತೂರಮ್ಮ ಹಾಗೂ ಸಮ್ಮಜಬಿ ರವರು ಯಾವುದೇ ಮನೆ ಕಟ್ಟದಿದ್ದರೂ ಸಹ, ಹಳೆ ಮನೆ ಮುಂದೆ ಅವರನ್ನು ನಿಲ್ಲಿಸಿ ಫೋಟೋ ತೆಗೆದು ಹಣ ಬಿಡುಗಡೆ ಮಾಡಿದ್ದೇನೆ ಅಂದರೆ ಸರಿಯಲ್ಲ. ತಾನು ಕಸ್ತೂರಮ್ಮ ಹಾಗೂ ಸಮ್ಮಜಬಿ ರವರು ಮನೆ ಕಟ್ಟಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ಪರಿಶೀಲನೆ ಮಾಡಿಲ್ಲ ಅಂದರೆ ಸರಿಯಲ್ಲ. ಛಾಯಾಚಿತ್ರ ತೆಗೆಯುವಾಗ ಫಲಾನುಭವಿಯನ್ನು ನಿಲ್ಲಿಸಿ, ಛಾಯಾಚಿತ್ರ ತೆಗೆಯಬೇಕಾಗುತ್ತದೆ ಅನ್ನೋದು ನಿಜ. ನಿ.ಡಿ.4 ಫೋಟೋದಲ್ಲಿ ಫಾತಿಮಾ ಫಲಾನುಭವಿ ಇಲ್ಲ ಅನ್ನೋದು ನಿಜ ಎಂದು ನುಡಿದಿರುತ್ತಾರೆ.

49. ಸಾಕ್ಷಿಯು ಮುಂದುವರೆದು ಫಾತಿಮಾ ರವರು ಹೊಲಕ್ಕೆ ಹೋದ ಕಾರಣ ಅವರ ತಂದೆಯನ್ನು ನಿಲ್ಲಿಸಿ, ಛಾಯಾಚಿತ್ರ ತೆಗೆಯಲಾಗಿದೆ ಎಂದು ನುಡಿದಿರುತ್ತಾರೆ. ಫಾತಿಮಾ ರ ತಂದೆಯ ಹೆಸರು ಹುಸೇನ್‌ಸಾಬ್ ನಿ.ಡಿ.4 ಛಾಯಾಚಿತ್ರದಲ್ಲಿ ಫಾತಿಮಾ ರವರ ತಂದೆ ಹಾಜರಿದ್ದು, ಅವರನ್ನು ನಿಲ್ಲಿಸಿ ಫೋಟೋ ತೆಗೆಯಲಾಗಿದೆ ಅಂತ ಬರೆದಿಲ್ಲ ಅನ್ನೋದು ನಿಜ. ಫಾತಿಮಾ, ಲಾಲ್‌ಬಿ ಮತ್ತು ಹುಸೇನ್‌ಬಿರವರ ಛಾಯಚಿತ್ರಗಳಲ್ಲಿ ಎರಡೇ ಹಂತದ ಛಾಯಾಚಿತ್ರಗಳಿವೆ ಅನ್ನೋದು ನಿಜ ಎಂದು ನುಡಿದಿರುತ್ತಾರೆ.

50. ಸಾಕ್ಷಿಯು ಮುಂದುವರೆದು ತಾನು ಲಾಲ್‌ಬಿ, ಹುಸೇನ್‌ಬಿ ಮತ್ತು ಫಾತಿಮಾ ರವರಿಗೆ ಅವರು ಮನೆ ಕಟ್ಟದೇ ಇದ್ದರೂ ಹಣ ಸಂದಾಯ ಮಾಡಿದ್ದೇನೆ ಅಂದರೆ ಸರಿಯಲ್ಲ. ಫಲಾನುಭವಿಗಳು ಮನೆ ಕಟ್ಟಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ಪರಿಶೀಲನೆ ಮಾಡದೇ, ಅವರಿಗೆ ಹಣ ಸಂದಾಯ ಮಾಡಿ, ತಾನು ಕರ್ತವ್ಯಲೋಪ ಎಸಗಿದ್ದೇನೆ ಅಂದರೆ ಸರಿಯಲ್ಲ. 2009 ಸೆಪ್ಟೆಂಬರ್‌ನಲ್ಲಿ ನೆರೆ ಪ್ರವಾಹ ಬಂದು, ಎಲ್ಲಾ ಮನೆಗಳು ಕೊಚ್ಚಿಕೊಂಡು ಹೋಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ..

51. ಈ ಪ್ರಕರಣದಲ್ಲಿ ಶಿಸ್ತು ಪ್ರಾಧಿಕಾರದ ಪರವಾಗಿ ವಿಚಾರಣೆ ಮಾಡಲಾದ ದೂರುದಾರ ಸಾಕ್ಷಿ-1 ರಿಂದ 3 ಇವರುಗಳ ಹೇಳಿಕೆಗಳನ್ನು ಹಾಗೂ ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುವ ನಿಶಾನೆ.ಪಿ-1 ರಿಂದ 3 ರ ವರೆಗಿನ ದಾಖಲೆಗಳನ್ನು ಪರಿಶೀಲಿಸಲಾಯಿತು ಮತ್ತು ಆ.ಸ.ನೌ ರವರ ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

52. ಶಿಸ್ತು ಪ್ರಾಧಿಕಾರದ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿ-1 ಶ್ರೀ. ಮುತ್ತಣ್ಣ ಮತ್ತು ಸಾಕ್ಷಿ-2 ಶ್ರೀ. ರಂಗನಾಥ್ ನಾಯ್ಕ್ ಇಬ್ಬರೂ ದೂರು ಅರ್ಜಿದಾರರು ಇದ್ದು, ತಮ್ಮ ವಿಚಾರಣಾ ನ್ಯಾಯಾಲಯದ ಮುಂದಿನ ಹೇಳಿಕೆಯಲ್ಲಿ ತಾವು ಕೆಲವು ದಾಖಲೆಗಳಿಗೆ ಸಹಿ ಮಾಡಬೇಕೆಂದು ಕೇಳಿಕೊಂಡ ಮೇರೆಗೆ ತಾವು ಸಹಿ ಮಾಡಿದ್ದು, ಪ್ರಕರಣದ ಬಗ್ಗೆ ತಮಗೆ

ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ನಿ.ಪಿ-1 ಮತ್ತು 2 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿರುವುದಿಲ್ಲ ಎಂದು ಪ್ರತಿಕೂಲವಾಗಿ ಹೇಳಿಕೆ ಕೊಟ್ಟಿದ್ದರೂ ಸಾಕ್ಷಿ-1 ರವರು ತಮ್ಮ ಶಿಸ್ತು ಪ್ರಾಧಿಕಾರದ ಪರ ವಿಚಾರಣೆ ಮಾಡಲಾದ ಪಾಟೀ ಸವಾಲಿನಲ್ಲಿ ತಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು, ತನಗೆ ಕನ್ನಡ ಓದಲು ಬರೆಯಲು ಬರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ ಮತ್ತು ಇಬ್ಬರೂ ಸಾಕ್ಷಿಗಳು ತಮ್ಮ ಪಾಟೀ ಸವಾಲಿನಲ್ಲಿ ತಮ್ಮ ಗ್ರಾಮದಲ್ಲಿ ಇಂದಿರಾ ಆವಾಸ್ ಯೋಜನೆ ಹಾಗೂ ಬಸವ ವಸತಿ ಯೋಜನೆಯಡಿ ಮನೆಗಳನ್ನು ನಿರ್ಮಿಸಿರುವ ಬಗ್ಗೆ ನುಡಿದಿರುತ್ತಾರೆ. ಸಾಕ್ಷಿ-1 ಮತ್ತು 2 ರವರು ಆ.ಸ.ನೌ ರವರಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ ಪ್ರತಿಕೂಲ ಸಾಕ್ಷಿಗಳಾಗಿ ನುಡಿದಿರುವುದು ಕಂಡು ಬರುತ್ತದೆ.

53. ಸಾಕ್ಷಿ-3 ರವರು ಪ್ರಕರಣದ ತನಿಖಾಧಿಕಾರಿ ಇದ್ದು, ತಮ್ಮ ಹೇಳಿಕೆಯಲ್ಲಿ ಈ ಪ್ರಕರಣದಲ್ಲಿ ಆ.ಸ.ನೌ ರವರ ವಿರುದ್ಧ ಸಲ್ಲಿಸಲಾದ ದೂರಿಗೆ ಸಂಬಂದಪಟ್ಟಂತೆ ತನಗೆ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಬಂದ ನಿರ್ದೇಶನದ ಮೇರೆಗೆ ತಾನು ಸ್ಥಳಕ್ಕೆ ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಾನಿಕ ಜನರನ್ನು ವಿಚಾರಣೆ ಮಾಡಿ ನಿ.ಪಿ-3 ರಂತೆ ವರದಿ ನೀಡಿದ ಬಗ್ಗೆ ಹೇಳಿಕೆ ನೀಡಿರುತ್ತಾರೆ. ಸದರಿ ಸಾಕ್ಷಿದಾರರು ತಮ್ಮ ಹೇಳಿಕೆಯಲ್ಲಿ 2011-12 ನೇ ಸಾಲಿನ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಾದ ಶ್ರೀಮತಿ. ಕಸ್ತೂರಮ್ಮ ಕೋಂ ಶರಣಪ್ಪ ಸಜ್ಜನ್ ಹಾಗೂ 2012-13 ನೇ ಸಾಲಿನ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಾದ ಶ್ರೀಮತಿ. ಸಮ್ಮಜಭಿ ಕೋಂ ಮಹೀಬೂಬಾ ಸಾಬ್ ಇವರು ಹಳೆಯ ಮನೆ ಮುಂದೆ ನಿಂತು ಭಾವಚಿತ್ರ ತೆಗೆಸಿ ಹೊಸ ಮನೆ ಕಟ್ಟಿಕೊಂಡಂತೆ ಅನುದಾನದ ಹಣವನ್ನು ಪಡೆದುಕೊಂಡಿರುತ್ತಾರೆ ಎಂಬ ಆಪಾದನೆಗೆ ಸಂಬಂಧಿಸಿದಂತೆ, ತಾನು ದಾಖಲಾತಿ ಹಾಗೂ ಸ್ಥಳ ಪರಿಶೀಲನೆ ನಡೆಸಿದ್ದು, ಆ ವೇಳೆಗೆ ಫಲಾನುಭವಿಗಳಿಗೆ ಸಂಬಂಧಪಟ್ಟ ಮನೆ ಕಂಡುಬಂದಿರುವುದಿಲ್ಲ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದಾಗ ಬೇರೆ ಮನೆ ಮುಂದೆ

ನಿಲ್ಲಿಸಿ ಫೋಟೋಗಳನ್ನು ತೆಗೆಸಿರುವುದು ಕಂಡುಬಂದಿರುತ್ತದೆ ಹಾಗೂ ಫಲಾನುಭವಿಗಳಿಗೆ ಹಣವನ್ನು ಬಿಡುಗಡೆ ಮಾಡಿರುವುದು ಸ್ಪಷ್ಟವಾಗಿರುತ್ತದೆ. ಇದಕ್ಕೆ ಆ.ಸ.ನೌ ರವರೇ ಕಾರಣರಾಗಿರುತ್ತಾರೆ ಎಂದು ನುಡಿದಿರುತ್ತಾರೆ. ಅದೂ ಅಲ್ಲದೇ 2011-12 ನೇ ಸಾಲಿನ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಾದ ಶ್ರೀಮತಿ. ಫಾತಿಮಾ ಕೋಂ ಮೌಲಸಾಬ್, ಶ್ರೀಮತಿ. ಲಾಲಬೀ ಕೋಂ ದಾದಾ ಸಾಬ್ ಮತ್ತು ಶ್ರೀಮತಿ. ಹುಸೇನಬಿ ಕೋಂ ಹಸನಸಾಬ್ ಈ ಮೂರು ಜನರು ಮನೆಗಳನ್ನು ಕಟ್ಟಿಸಿಕೊಳ್ಳದೇ ಅನುದಾನವನ್ನು ಬಿಡುಗಡೆ ಮಾಡಿಸಿಕೊಂಡಿರುತ್ತಾರೆ ಎಂಬ ಆಪಾದನೆಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ನಡೆಸಿದಾಗ ಜಾಗೀರಾ ಪನ್ನೂರು ಗ್ರಾಮದಲ್ಲಿ ಸದರಿ ಫಲಾನುಭವಿಗಳಿಗೆ ಸಂಬಂಧಿಸಿದ ಮನೆಗಳು ಪತ್ತೆಯಾಗಿರುವುದಿಲ್ಲ ಹಾಗೂ ಅವರು ಮನೆಯನ್ನು ಕಟ್ಟಿಸಿಕೊಂಡಿರುವುದಿಲ್ಲ ಎಂದು ಸ್ಥಳೀಯರ ವಿಚಾರಣೆಯಿಂದ ತಿಳಿದುಬಂದಿರುತ್ತದೆ ಹಾಗೂ ಆ.ಸ.ನೌ ರವರು ಫಾತೀಮಾ ರವರಿಗೆ ರೂ.75,000/- ಗಳನ್ನು ಶ್ರೀಮತಿ. ಲಾಲಬೀ ರವರಿಗೆ ರೂ.35,000/- ಗಳನ್ನು ಹಾಗೂ ಶ್ರೀಮತಿ. ಹುಸೇನಭೀ ರವರಿಗೆ ರೂ.35,000/- ಗಳನ್ನು 1 ಮತ್ತು 2 ನೇ ಹಂತದ ಹಣವನ್ನು ಬಿಡುಗಡೆಗೊಳಿಸಿರುವುದು ಪರಿಶೀಲನೆಯಿಂದ ಸಾಬೀತಾಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಆ.ಸ.ನೌ ರವರ ಪರ ವಕೀಲರು ಪಾಟೀ ಸವಾಲಿಗೆ ಸುದೀರ್ಘವಾಗಿ ಒಳಪಡಿಸಿದ್ದರೂ ಸಹ ಸದರಿಯವರ ಹೇಳಿಕೆಯನ್ನು ತಿರಸ್ಕರಿಸುವಂತಹ ಯಾವುದೇ ಅಂಶಗಳು ಹೊರಹೊಮ್ಮಿರುವುದಿಲ್ಲ. ಅದೂ ಅಲ್ಲದೇ ಪಾಟೀ ಸವಾಲಿನಲ್ಲಿ 2009 ನೇ ಸಾಲಿನ ಸೆಪ್ಟೆಂಬರ್ 29 ಮತ್ತು 30 ರಂದು ಅತಿವೃಷ್ಟಿಯಾದ ಕಾರಣ ಗ್ರಾಮವೇ ಮಳೆ ನೀರಿನಲ್ಲಿ ನಿಂತಿದ್ದು, ಆ ಸಮಯದಲ್ಲಿ ಫಲಾನುಭವಿಗಳ ಮನೆಗಳು ಕೊಚ್ಚಿ ಕೊಂಡು ಹೋಗಿದ್ದವು ಹಾಗೂ ಯಾವುದೇ ಮನೆಗಳು ಉಳಿದಿರಲಿಲ್ಲ ಎಂದು ಸೂಚಿಸಿದ್ದು, ಅದನ್ನು ಸಾಕ್ಷಿದಾರರು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. 2011-12ನೇ ಸಾಲಿನ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಶ್ರೀಮತಿ. ಫಾತಿಮಾ, ಶ್ರೀಮತಿ. ಲಾಲಬೀ ಮತ್ತು ಶ್ರೀಮತಿ. ಹುಸೇನಬಿ ರವರಿಗೆ ಮನೆಗಳನ್ನು

ಕಟ್ಟಿಕೊಂಡಿರುತ್ತಾರೆಂದು ಅನುದಾನವನ್ನು ಬಿಡುಗಡೆ ಮಾಡಿಸಿಕೊಂಡಿದ್ದು, ಸದರಿ ಮನೆಗಳು ಆ.ಸ.ನೌ ರವರ ವಾದದಂತೆ 2009 ನೇ ಸಾಲಿನ ಸೆಪ್ಟೆಂಬರ್ 29 ಮತ್ತು 30 ರಂದು ಆದ ಅತಿವೃಷ್ಟಿ ಮಳೆಗೆ ಮನೆಗಳು ಕೊಚ್ಚಿಕೊಂಡು ಹೋಗುವ ಪ್ರಮೇಯವೇ ಉಂಟಾಗುವುದಿಲ್ಲ. ಕೇವಲ ಪ್ರಕರಣದಿಂದ ನುಣಿಚಿಕೊಳ್ಳುವ ಉದ್ದೇಶದಿಂದ ಆ ರೀತಿ ಅಸಂಬದ್ಧವಾಗಿ ಪಾಟೀ ಸವಾಲನ್ನು ಮಾಡಿರುವುದು ಅದು ಆ.ಸ.ನೌ ರವರು ಆಪಾದನೆಯಿಂದ ನುಣಿಚಿಕೊಳ್ಳಲು ಯಾವುದೇ ರೀತಿ ಸಹಕಾರಿಯಾಗುವುದಿಲ್ಲ.

54. ಆ.ಸ.ನೌ ರವರು ತಮ್ಮ ಪರವಾಗಿ ಸಾಕ್ಷ್ಯವನ್ನು ನೀಡಿ ಹಾಗೂ ದಾಖಲಾತಿಗಳನ್ನು ಅಂದರೆ ಛಾಯಾಚಿತ್ರಗಳನ್ನು ಹಾಜರುಪಡಿಸಿ ತಾನು ಸರ್ಕಾರದ ಕೆಲಸಕ್ಕೆ ಚ್ಯುತಿ ಮಾಡಿರುವುದಿಲ್ಲ ಮತ್ತು ತನ್ನ ಕೆಲಸದಲ್ಲಿ ಕರ್ತವ್ಯ ಲೋಪ ಎಸಗಿರುವುದಿಲ್ಲ. ಕಾರಣ ತನ್ನನ್ನು ದೋಷ ಮುಕ್ತ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ. ಆದರೆ ತನಿಖಾಧಿಕಾರಿಯು ಸ್ಥಳಕ್ಕೆ ಭೇಟಿ ನೀಡಿ ಸ್ಥಳೀಯರನ್ನು ವಿಚಾರಣೆಗೊಳಪಡಿಸಿ, ದಾಖಲೆಗಳನ್ನು ಪರಿಶೀಲಿಸಿ ತಮ್ಮ ವಿವರವಾದ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಹೇಳಿರುವಂತೆ ಆ.ಸ.ನೌ ರವರು ಅವರ ಮೇಲೆ ಹೊರಿಸಲಾದ ಆಪಾದನೆಗಳನ್ನು ಎಸಗಿರುತ್ತಾರೆ ಎನ್ನುವುದು ಸ್ಪಷ್ಟವಾಗಿ ರುಜುವಾತಾಗಿರುತ್ತದೆ.

55. ಈ ಮೇಲೆ ಹೇಳಿದ ಸಾಕ್ಷ್ಯಾಧಾರಗಳಿಂದ ಮತ್ತು ದಾಖಲಾತಿಗಳ ಮೇಲಿಂದ ಆ.ಸ.ನೌ ರವರು ತಮ್ಮ ಕರ್ತವ್ಯದಲ್ಲಿ ಕರ್ತವ್ಯ ಲೋಪ ಎಸಗಿ ದುರ್ನಡತೆ ತೋರಿರುವುದು ಕಂಡು ಬಂದಿದ್ದು, ಆ.ಸ.ನೌ ರವರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1)(i) ರಿಂದ (iii) ರಡಿಯಲ್ಲಿ, ಕರ್ತವ್ಯ ಲೋಪ ಮತ್ತು ದುರ್ನಡತೆ ಎಸಗಿರುವುದು ರುಜುವಾತಾಗಿರುತ್ತದೆ.

ಈ ಎಲ್ಲಾ ಕಾರಣಗಳಿಂದ **ಅಂಶ-1 ಕ್ಕೆ ಆ.ಸ.ನೌ ರವರ ಮೇಲೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಲಾಗಿದೆ.**

## <u>ವಿಚಾರಣಾ ವರದಿ</u>

ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರಾದ ಶ್ರೀ. ವಿಶ್ವನಾಥ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಕೊಟ್ನೆಕಲ್ ಗ್ರಾಮ ಪಂಚಾಯಿತಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ (ಪ್ರಸ್ತುತ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ), ಹಗರಿಬೊಮ್ಮನಹಳ್ಳಿ ತಾಲ್ಲೂಕು ಪಂಚಾಯಿತಿ, ಬಳ್ಳಾರಿ ಜಿಲ್ಲೆ ರವರ ವಿರುದ್ಧ ಹೊರಿಸಲಾದ ಆರೋಪವನ್ನು ರುಜುವಾತುಪಡಿಸಲಾಗಿದೆ ಎಂದು ನಿರ್ಣಯಿಸಲಾಗಿದೆ.

ಆ.ಸ.ನೌ ರವರ ನಿವೃತ್ತಿ ದಿನಾಂಕ: 31/05/2035.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

21/7

**(ಶೋಭಾ ಎಸ್)**
ಅಪರ ನಿಬಂಧಕರು (ವಿಚಾರಣೆಗಳು-13),
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| File 3 | **Witness examined on behalf of the Disciplinary Authority** |
|---|---|
| | **PW-1**: Sri. Mutthanna (Original) |
| | **PW-2:** Sri. Ranganatha Nayak (Original) |
| | **PW-3:** Sri. Ayyanagouda Patil (Original) |
| | **Witness examined on behalf of the Defence** |
| | **DW-1**: Vishwanath (Original) |
| File 4 | **Documents marked on behalf of the Disciplinary Authority** |
| | **Ex. P-1**: Form No.I (Original)<br>**Ex.P-1(a)** : Signature of the complainant. |
| | **Ex.P-2**: Form No-II (Original)<br>**Ex.P-2(a):** Signature of the complainant. |
| | **Ex. P-3:** Report of I.O (Original)<br>**Ex.P-3(a):** Signature of the complainant. |
| | **Documents marked on behalf of the DGO** |
| | **Ex.D-1:** Photographs and GPS copies related to Smt. Kasturamma, page no. 75-76 originals, page no. 77-78 certified copies, page no. 79 xerox copy, page no. 80 original. |
| | **Ex.D-2:** Photographs and GPS copies related to Smt. Samjbhi, page no. 81 original, page no. 82 xerox copy. |
| | **Ex.D-3:** Photographs and GPS copies related to Smt. Lalabhi, page no. 83-84 originals, page no. 85 xerox copy. |

| | |
|---|---|
| | **Ex.D-4:** Photographs and GPS copies related to Smt. Fathima, page no. 86-87 originals, page no.88 xerox copy. |
| | **Ex.D-5:** Photographs and GPS copies related to Sri. Hussain, page no.89 original, page no. 90 xerox copy. |
| | **Ex.D-6:** The DGO written a letter to Taluka Executive Officer regarding to GPS Technical error (certified copy) |
| | **Ex.D-7:** Proceedings of Grama Panchayath Samanya Sabhe (Certified copies) |
| | **Ex.D-8:** The Village Accountant issued by certified copy dated: 25/05/2020 (Original) |

**Dated this the 21st day of July 2022**

21/7

**(Shobha. S)**
Additional Registrar Enquiries-13
Karnataka Lokayukta
Bangalore.